# ಪರಿಶುದ್ಧ ಭಾವದ ಪಚ್ಚೆಕಲ್ಲು

ಒಡವೆಯಲ್ಲಿ ಹಸುರು ಹರಳಿನವು ಬಹಳ ಆಕರ್ಷಕವಾಗಿರುತ್ತದೆ. ಪಚ್ಚೆಕಲ್ಲು, ಹಸುರು ಹರಳು, ಎಮರಾಲ್ಡ್ ಎಂಬ ಹೆಸರಿನ ಇಂಥ ಒಡವೆಗಳು ಮ್ಯಾಚಿಂಗ್ ಮಾಡಿಕೊಳ್ಳಲು ಚೆನ್ನಾಗಿರುತ್ತವೆ.

ಪಚ್ಚೆಯು ಒಂದು ಅಪರೂಪದ ಮತ್ತು ದುಬಾರಿ ಬೆಲೆಯ ಹರಳಿನ ಕಲ್ಲು. ಇದು ಬೆರಿಲಿಯಂ, ಅಲ್ಯೂಮಿನಿಯಂ ಮತ್ತು ಸಿಲಿಕೇಟ್ ಇರುವ ಖನಿಜದ ವೈವಿಧ್ಯ. ಕಡು ಹಸುರಿನಿಂದ ಕೂಡಿದ ಪಚ್ಚೆಯಲ್ಲಿ ಕ್ರೋಮಿಯಂ ಕೂಡ ಇರುತ್ತದೆ ಎನ್ನುವುದು ತಜ್ಞರ ಅಭಿಮತ. ಎಮರಾಲ್ಡ್‌ನಲ್ಲಿ ಹಲವು ವಿಧದ ಒಡವೆಗಳನ್ನು ತಯಾರಿಸಬಹುದು.

ಎಮರಾಲ್ಡ್ ಅನ್ನು ಮಿಕ್ಸ್ ಅಂಡ್ ಮ್ಯಾಚ್ ಪರಿಕಲ್ಪನೆಗೆ ಸರಿಯಾಗಿ ಹೊಂದಿಸಬಹುದು. ಸಾಮಾನ್ಯವಾಗಿ ಹಸುರು–ಹಳದಿ ಪ್ರಿಂಟ್ಸ್ ಇರುವ ಬಾಂದನಿ ಉಡುಪುಗಳು, ಸ್ಲೀವ್‌ಲೆಸ್ ಸಾಲಿಡ್ ಬ್ಲ್ಯಾಕ್ ಕಲರ್ ಉಡುಪಿನ ಜತೆಗೆ ಸಿಲ್ವರ್ ಜಿಯೊಮೆಟ್ರಿಕ್ ಪ್ಯಾಟರ್ನ್ ಇರುವ ನೆಕ್‌ಪೀಸ್, ಸಿಲ್ವರ್ ಮೆಟಾಲಿಕ್ ಪೆಂಡೆಂಟ್, ನೆಕ್ಲೇಸ್, ವುಡನ್ ಬ್ಯಾಂಗಲ್ ಸೆಟ್, ಆ್ಯಂಟಿಕ್ ಫಿನಿಷ್ ಸಿಲ್ವರ್ ಟೆಂಪಲ್ ನೆಕ್ಲೇಸ್ ಮುಂತಾದ ಎಮರಾಲ್ಡ್ ಒಡವೆಯೊಂದಿಗೆ ಚೆನ್ನಾಗಿ ತಳಕು ಹಾಕುವಂತಿವೆ.

ಸಾಂಪ್ರದಾಯಿಕ ಉಡುಪುಗಳಾದ ಗ್ರೀನ್ ಕಾಟನ್ ಫ್ಲೋರಲ್ ಟಾಪ್, ಬ್ಲೂ ಜೀನ್ಸ್, ಮಲ್ಟಿ ಕಲರ್ ಎಂಬ್ರಾಯಿಡರಿ ವರ್ಕ್ ಉಡುಪುಗಳಿಗೆ ಮ್ಯಾಚಿಂಗ್ ಮಾಡಲು ಪಚ್ಚೆ ಕಲ್ಲು ಇರುವ ಆ್ಯಂಟಿಕ್ ಸಿಲ್ವರ್ ಜುಮ್ಕಿ, ಮಲ್ಟಿಕಲರ್ ಒಡವೆ ಸೆಟ್‌ಗಳು ಉತ್ತಮ ಸಾಥ್ ನೀಡಬಹುದು.





ಹಸುರು ಹರಳಿನ ಆಭರಣ ಮ್ಯಾಚಿಂಗ್ ಆಗುತ್ತದೆ. ಹಸುರಿನೊಂದಿಗೆ ಬಿಳಿ ಹರಳು ಸೇರಿದರೆ ಬಹಳ ಸೊಗಸಾಗಿರುತ್ತದೆ.

## ಮಿಲ್ಕಿ ಪಿಂಕ್ ಡ್ರಾಪ್ ನೆಕ್ಲೇಸ್

ಹೆಸರೇ ಹೇಳುವಂತೆ ಹಾಲಿನ ಬಿಳಿ ಮಿಶ್ರಿತ ಪಿಂಕ್ ಹರಳು ಹೊಂದಿದ್ದು ಕೃತಕ ರೂಬಿ, ಎಮರಾಲ್ಡ್‌ನಿಂದ ಮಾಡಿದ ಆಭರಣ. ನೋಡಲು ಚೆನ್ನಾಗಿದ್ದು ಬೆಲೆಯೂ ದುಬಾರಿಯೇನಲ್ಲ. ಇವುಗಳನ್ನು ಹೆಚ್ಚಾಗಿ ಗೂಡು ಸೆಟ್ಟಿಂಗ್‌ನಲ್ಲಿ (ಚಿನ್ನ ಬಳಸಿ ಗೂಡಿನ ಆಕಾರದಲ್ಲಿ ಮಾಡುವ ಒಂದು ರೀತಿಯ ವಿನ್ಯಾಸ) ಮಾಡುವುದರಿಂದ ಹರಳುಗಳು ಗಟ್ಟಿಯಾಗಿರುತ್ತವೆ. ಬಣ್ಣ ಹೋಗುವುದಿಲ್ಲ. ಇದಕ್ಕೆ ಸರಿ ಹೊಂದುವಂತೆ ಹರಳುಗಳ ಬಂಚ್ ಮಾಡಲಾಗಿದೆ. (ಈ ಹರಳುಗಳು ಹೆಚ್ಚಾಗಿ ವೃತ್ತಾಕಾರ, ತ್ರಿಕೋನ, ಬೋಟ್, ಪಿಯರ್ ಮತ್ತು ಓವಲ್ ಶೇಪ್‌ನಲ್ಲಿ ಇರುತ್ತವೆ).

ಈ ಆಭರಣಗಳು ಫ್ಲೆಕ್ಸಿಬಲ್ ಆಗಿದ್ದು ಕುತ್ತಿಗೆಗೆ ಬೇಕಾದ ರೀತಿಯಲ್ಲಿ ಹೊಂದಿಕೊಂಡು ನೋವಾಗದಂತೆ, ಭಾರವಾಗದಂತೆ ಶೋಭಿಸುತ್ತವೆ.

ಜನರಿಗೆ ಕೆಂಪು, ಹಸುರು ಕಾಂಬಿನೇಷನ್ ಆಭರಣ ಎಂದರೆ ಬಲು ಅಚ್ಚುಮೆಚ್ಚು. ಏಕೆಂದರೆ ಎಲ್ಲಾ ದಿರಿಸುಗಳಿಗೆ ಇದು ಹೊಂದಿಕೊಳ್ಳುತ್ತದೆ. ಹಿಂದಿನ ಕಾಲದಿಂದಲೂ ಇದನ್ನು ರಾಣಿಯರು, ನಾಟ್ಯ ಮಾಡುವವರು ಧರಿಸುತ್ತಿದ್ದರು. ಕೇರಳದಲ್ಲಿ ಒಂದು ಕೆಂಪು ಹರಳಿನೊಂದಿಗೆ ಇನ್ನೊಂದು ಹರಳು ಇರುವ ನೆಕ್ಲೇಸ್, ಎರಡು ಎಳೆ ಸರ ಜೊತೆಗೆ ಒಂದು ಕರಿಮಣಿ ಸರ ಅಥವಾ ಸಣ್ಣ/ದೊಡ್ಡ ಹಾರಮ್‌ನೊಂದಿಗೆ ಲಾಂಗ್ ನೆಕ್ಲೇಸ್... ಹೀಗೆ ಯಾವುದೇ ಆಭರಣವಾದರೂ ಒಂದು ಆಭರಣದಲ್ಲಿ ಹರಳು ಇರಬೇಕು. ಆಗ ಸಖತ್ ಲುಕ್ ಬರುತ್ತದೆ.

ಕಾಲೇಜು ಯುವತಿಯರು, ಪುಟಾಣಿ ಹೆಣ್ಣು ಮಕ್ಕಳು ಇಂದು ತಮ್ಮ ದಿರಿಸಿಗೆ ಬಹಳ ಆದ್ಯತೆ ನೀಡುತ್ತಿದ್ದಾರೆ. ಉತ್ತಮ ಉಡುಗೆಗೆ ಆಭರಣದೊಂದಿಗೆ ಕೊಂಚ ಮೇಕಪ್ ಜೊತೆಯಾದರೆ ಅಂದ ಇಮ್ಮಡಿಯಾಗುತ್ತದೆ. ■



ಕಡು ಹಸಿರು ರೇಡಿಯಂಟ್ ಬಣ್ಣದ ಎಮರಾಲ್ಡ್ ಒಡವೆ, ಧರಿಸುವವರ ಮತ್ತು ನೋಡುಗರ ಮನಸ್ಸಿಗೆ ಸಂತೋಷ ಉಂಟುಮಾಡುವಂಥವು. ಜೆಮ್‌ಸ್ಟೋನ್ ಆಗಿರುವ ಪಚ್ಚೆಯನ್ನು ಚಿನ್ನದ ಬಳೆ, ಕಿವಿಯೋಲೆ, ನೆಕ್ಲೇಸ್, ಬ್ರೇಸ್‌ಲೆಟ್‌ಗಳಲ್ಲಿ ಅಳವಡಿಸಿ ಧರಿಸಿದರೆ ಎಲಿಗೆಂಟ್ ಲುಕ್ ಕೊಡುತ್ತದೆ.

■ ಯು.ಎ.